# ವಿವಿಧ ಸಾಧುಗಳ ಸ್ಮೃತಿಗಳು

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಅನುವಾದ: **ಕುಮಾರಿ ಪಿ. ಉಷಾ**

೧೯೬೨ರಲ್ಲಿ ಕಾಶಿಯ ಸ್ವಾಮಿ ಪರಮಾನಂದರು ನನಗೆ ಹೇಳಿದರು: ''ನೋಡು, ನಾನು ಸೇವಾಶ್ರಮದಿಂದ ದಿನಾ ವಿಶ್ವನಾಥನ ದರ್ಶನಕ್ಕೆ ಹೋಗುತ್ತೇನೆ. ಪ್ರತಿದಿನವೂ 'ಶಿವ ಮಹಿಮ್ನ ಸ್ತೋತ್ರ'ದ ಒಂದು ಶ್ಲೋಕವನ್ನು ಕಾಗದದಲ್ಲಿ ಬರೆದುಕೊಂಡು ದಾರಿಯಲ್ಲಿ ಅದನ್ನು ಮತ್ತೆ ಮತ್ತೆ ಪುನರಾವರ್ತಿಸುತ್ತ ಸಾಗುತ್ತೇನೆ. ಹೀಗೆ ಶ್ಲೋಕವು ಕಂಠಸ್ಥವಾಗಿಬಿಡುತ್ತದೆ, ಅದರ ಅರ್ಥವನ್ನೂ ಗ್ರಹಿಸುತ್ತೇನೆ. ಹೀಗೆ ವಿಶ್ವನಾಥನ ದರ್ಶನವನ್ನು ಮಾಡುತ್ತ ಸ್ತೋತ್ರದ ೪೧ ಶ್ಲೋಕಗಳನ್ನೂ ನಾನು ಬಾಯಿಪಾಠ ಮಾಡಿದ್ದೇನೆ.''

### ಸ್ವಾಮಿ ಮಿತ್ರಾನಂದ

ಸ್ವಾಮಿ ಮಿತ್ರಾನಂದರು ಬೇಲೂರು ಮಠದ ಆಫೀಸಿನ 'ಕಾನೂನು ವಿಭಾಗದಲ್ಲಿ' ಕೆಲಸ ಮಾಡುತ್ತಿದ್ದರು. ಕೆಲಸದ ಮೇರೆಗೆ ಅವರು ಕೆಲವೊಮ್ಮೆ ಕೊಲ್ಕತ್ತಕ್ಕೆ ಬಂದಾಗ ಮಧ್ಯಾಹ್ನ ಅದ್ವೈತ ಆಶ್ರಮದಲ್ಲಿ ಊಟ ಮಾಡುತ್ತಿದ್ದರು. ಆಗ ಅದ್ವೈತ ಆಶ್ರಮವು ೪, ವೆಲಿಂಗ್ಟನ್ ಲೇನಿನಲ್ಲಿತ್ತು. ೧೯೬೦ರಲ್ಲಿ ಲಿಯೋ ಟಾಲ್‌ಸ್ಟಾಯ್ ಅವರ ಸಣ್ಣ ಕತೆಯೊಂದರ ಮೂಲಕ ಅವರು ನನಗೊಂದು ಒಳ್ಳೆಯ ಉಪದೇಶ ನೀಡಿದ್ದರು.

''ರಷ್ಯದ ರೈತನೊಬ್ಬನ ಬಳಿ ಎರಡು ಎತ್ತುಗಳಿದ್ದವು. ಅವುಗಳಲ್ಲಿ ಒಂದು ತುಂಬ ಸೊಕ್ಕಿತ್ತು. ರೈತನು ಹೊಲವನ್ನುಳುವಾಗ ಅದರ ಮೇಲೆ ನೊಗವನ್ನು ಏರಿಸಿದರೆ, ಆಲಸ್ಯದಿಂದ ಮಲಗಿಬಿಡುತ್ತಿತ್ತು. ಇದರಿಂದ ಬೇಸತ್ತ ರೈತನು ಅದನ್ನು ಕಸಾಯಿಗೆ ಮಾರಿಬಿಟ್ಟನು. ಕಸಾಯಿಯು ಅದನ್ನು ವಧಿಸಿ ಮಾಂಸವನ್ನು ಮಾರಿದನು. ಉಳಿದ ಎತ್ತು ಮುದಿಯಾಗುವವರೆಗೂ ನೇಗಿಲನ್ನು ಹೊತ್ತು ರೈತನಿಗೆ ಹೊಲ ಉಳುವುದರಲ್ಲಿ ನೆರವಾಯಿತು. ಕೊನೆಗೆ ಅದಕ್ಕೆ ನೇಗಿಲನ್ನು ಎಳೆಯುವುದು ಅಸಾಧ್ಯವಾದಾಗ ರೈತನು, ''ಈ ಎತ್ತು ತನ್ನ ಜೀವನವೆಲ್ಲ ನನ್ನ ಕೆಲಸದಲ್ಲಿ ನೆರವಾಗಿದೆ, ಆದ್ದರಿಂದ ನಾನಿದನ್ನು ಕಸಾಯಿಗೆ ಮಾರುವುದಲ್ಲ. ಬದುಕಿದ್ದಷ್ಟು ದಿನವೂ ಇದು ನನ್ನ ಬಳಿಯೇ ಇರಲಿ, ಇದಕ್ಕೆ ನಾನು ಆಹಾರವನ್ನು ನೀಡುವೆ,'' ಎಂದು ತೀರ್ಮಾನಿಸಿದನು.

''ರೈತನು ಎಷ್ಟು ಕೃತಜ್ಞನೆಂದು ನೋಡು. ಆ ಮುದಿ ಎತ್ತನ್ನು ಅದರ ಕೊನೆಯವರೆಗೂ ಪೋಷಿಸಿದನು. ಅದೇ ರೀತಿ ಶ್ರೀರಾಮಕೃಷ್ಣರೂ ಕೂಡ. ತನು-ಮನ-ಹೃದಯದಿಂದ ನಾವು ಅವರ ಕಾರ್ಯವನ್ನು ಮಾಡಿದ್ದೇ ಆದರೆ ಅವರು ಖಂಡಿತಾ ನಮ್ಮನ್ನು ಸಲಹುವರು. 'ವೃದ್ಧಾಪ್ಯದಲ್ಲಿ ನನಗೇನಾಗುವುದು? ಯಾರು ನೋಡಿಕೊಳ್ಳುವರು?' ಎಂದೆಲ್ಲಾ ಎಂದಿಗೂ ಚಿಂತಿಸಬೇಡ.'' ಮಹಾರಾಜರ ಈ ಕತೆಯು ನನ್ನ ಮನದ ಮೇಲೆ ಚಿರಮುದ್ರೆಯನ್ನೊತ್ತಿತು. ಆದ್ದರಿಂದಲೇ ಸಾಧುಗಳು ಸಾಧುಸಂಗವನ್ನು ಮಾಡಬೇಕು.

### ಸ್ವಾಮಿ ಸೂಕ್ಷ್ಮಾನಂದರಿಂದ ಕೇಳಿದ್ದು

ಸ್ವಾಮಿ ಸೂಕ್ಷ್ಮಾನಂದರು ಶ್ರೀರಾಮಕೃಷ್ಣ, ಶ್ರೀಮಾತೆ ಹಾಗೂ ಶ್ರೀರಾಮಕೃಷ್ಣರ ಶಿಷ್ಯರ ಬಗ್ಗೆ ನಾನಾ ವಿಷಯಗಳನ್ನು ಹೇಳಿದ್ದಾರೆ:

ಶ್ರೀರಾಮಕೃಷ್ಣರ ಶಿಷ್ಯರು ಅನೇಕ ಸೇನಾಪತಿಗಳನ್ನೆ ತಯಾರಿಸಿರುವರು! ಅವರ ಶಿಷ್ಯರಲ್ಲಿ ಯಾರೂ ಸಾಮಾನ್ಯರಲ್ಲ. ಠಾಕೂರರು ತಮ್ಮ ಕಾರ್ಯವನ್ನು ನೆರವೇರಿಸಲು ವಿಭಿನ್ನ ದೇವದೇವಿಯರನ್ನೂ, ಹಿಂದಿನ ಅವತಾರಗಳ ಪಾರ್ಷದರನ್ನೂ ಸೇರಿಸಿ ತಮ್ಮ ಶಿಷ್ಯಮಂಡಲಿಯನ್ನು ರಚಿಸಿದರು. ಸ್ವಾಮೀಜಿಯವರು ಸಪ್ತರ್ಷಿಗಳಲ್ಲೊಬ್ಬ ಋಷಿಯೂ, ನರರೂಪಿ ನಾರಾಯಣನೂ, ಶಿವಾಂಶ ಸಂಭೂತರೂ ಆಗಿದ್ದರು. ರಾಜಾ ಮಹಾರಾಜರು ವ್ರಜ ಭೂಮಿಯ ಕೃಷ್ಣಸಖ ರಾಖಾಲ. ಪ್ರೇಮಾನಂದರು ರಾಧೆಯ ಅಂಶದಿಂದಲೂ, ನಿರಂಜನಾನಂದರು ರಾಮನ ಅಂಶದಿಂದಲೂ, ಪೂರ್ಣನು ವಿಷ್ಣುವಿನ ಅಂಶದಿಂದಲೂ ಜನ್ಮ ತಾಳಿದವರು. ಯೋಗಾನಂದರು ಪೂರ್ವಜನ್ಮದಲ್ಲಿ ಅರ್ಜುನನಾಗಿದ್ದರೆ, ವಿಜ್ಞಾನಾನಂದರು ಜಾಂಬವಂತನೂ, ಲಾಟು ಮಹಾರಾಜರು ಹನುಮಂತನೂ ಆಗಿದ್ದರು. ಶಿವಾನಂದರು ಶಿವನ ಅಂಶದಿಂದ ಜನ್ಮವೆತ್ತಿದ್ದರು. ಆದರೆ ಅವರೊಮ್ಮೆ ಹೀಗೂ ಹೇಳಿದ್ದುಂಟು — 'ಬಹುಶಃ ನಾನು ಹಿಂದೊಮ್ಮೆ ಬೌದ್ಧಸಂನ್ಯಾಸಿಯಾಗಿದ್ದಿರಬೇಕು.' ರಾಮಕೃಷ್ಣಾನಂದರು ಹಾಗು ಶಾರದಾನಂದರು ಏಸುಕ್ರಿಸ್ತನ ನೇರ ಶಿಷ್ಯರುಗಳಾಗಿದ್ದರು. ಶ್ರೀ 'ಮ' ಮತ್ತು ಬಲರಾಮ ಬೋಸ್ ಚೈತನ್ಯರ ಪಾರ್ಷದರೂ, ಗಿರೀಶನು ಭೈರವನ ಅವತಾರವೂ ಆಗಿದ್ದರು. 'ನಾನು ತಾಯಿ ಯಶೋದೆ' ಎಂದು ಅಖಂಡಾನಂದರು ಹೇಳಿದ್ದರು.

ಭಕ್ತ ಮಹಿಳೆಯರಲ್ಲಿ ಗೋಪಾಲೇರ್ ಮಾ ವ್ರಜಭೂಮಿಯ ಹಣ್ಣು ಮಾರುವವಳಾಗಿದ್ದರು; ಯೋಗಿನ್ ಮಾ ಕೃಪಾಸಿದ್ಧ ಗೋಪಿಯಾಗಿದ್ದು ಆಕೆ ಜಯಾ ಕೂಡ ಹೌದು. ಗೋಲಾಪ್ ಮಾ ವಿಜಯಾ; ನಿಸ್ತಾರಿಣೀ ದೇವಿ ಛಿನ್ನಮಸ್ತಾಳ ಅಂಶ ಹಾಗೂ ರಾಸಮಣಿ ಜಗದಂಬೆಯ ಅಷ್ಟಸಖಿಗಳಲ್ಲೊಬ್ಬಳು. ಲಕ್ಷ್ಮೀ ದೀದಿ ಶೀತಲಾ ಮಾತೆಯ ಅವತಾರ.

ಯುಗಾವತಾರ ಶ್ರೀರಾಮಕೃಷ್ಣರು ತಮ್ಮ ಲೀಲೆಯಲ್ಲಿ ಪಾಲ್ಗೊಳ್ಳಲು ಈ ವಿಶಿಷ್ಟ ವ್ಯಕ್ತಿಗಳನ್ನು ತಮ್ಮೊಡನೆ ಕರೆತಂದಿದ್ದರು. ಇವರಾರೂ ನಮ್ಮಂತೆ ಸಾಧಾರಣರಲ್ಲ. ನೋಡು, ತಮ್ಮ ಶಿಷ್ಯರ ವಿಭಿನ್ನ ಭಾವಗಳಲ್ಲಿ ಠಾಕೂರರ ಅನಂತ ಭಾವಗಳು ರೂಪ ತಾಳಿವೆ. ಸ್ವಾಮೀಜಿ ಅಸಾಧಾರಣ ಶಕ್ತಿವಂತರಾಗಿದ್ದರು. ಠಾಕೂ

ರರ ಅನಂತ ಭಾವರಾಶಿಯನ್ನು ಅವರು ವಿಶ್ವದ ಎಲ್ಲೆಡೆಯೂ ಕೃಷಿಕರು ಬೀಜ ಬಿತ್ತುವಂತೆ ಬಿತ್ತಿದರು. ಬಳಿಕ 'ಈ ಭಾವ ಧಾರೆಯು ೧೫೦೦ ವರ್ಷಗಳ ಪ್ರಸ್ತುತವಾಗಿರುತ್ತವೆ' ಎಂಬ ಭವಿಷ್ಯವಾಣಿಯನ್ನೂ ನುಡಿದಿದ್ದರು.

ರಾಜಾ ಮಹಾರಾಜರು ಭಾವಜಗತ್ತಿನ ಚಿಲುಮೆಯಾಗಿದ್ದರು. ಒಂದು ದಿನ ಅವರು ಠಾಕೂರರನ್ನು ಕೇಳಿದ್ದರು, 'ಕೆಲವರು ಸತ್ವ, ಕೆಲವರು ತಮೋಗುಣವುಳ್ಳವರು. ನೀವು ಇದನ್ನು ಹೇಗೆ ತಿಳಿಯುವಿರಿ?' ಠಾಕೂರರು ಇದಕ್ಕುತ್ತರವಾಗಿ, 'ಕನ್ನಡಿಯಲ್ಲಿ ಮುಖವನ್ನು ಕಾಣುವಂತೆ ನನಗೆ ಇತರರ ಮನದಲ್ಲೇನಿದೆ ಎಂಬುದು ಸ್ಪಷ್ಟವಾಗಿ ಕಾಣುತ್ತದೆ' ಎಂದರು. ಇತರರ ಮನಸ್ಸನ್ನು ಓದುವ ಶಕ್ತಿಯನ್ನು ಮಹಾರಾಜರು ಪಡೆದರು; ಇತರರ ಮನದಲ್ಲಿನ ಕೊಳೆ, ಮಾಲಿನ್ಯವನ್ನು ನೋಡಲಾರಂಭಿಸಿದರು. ಮನುಷ್ಯರ ಮನಸ್ಸಿನ ಕೊಳಕನ್ನು ಮಾತ್ರವೇ ನೋಡುತ್ತಿರುವರೆಂದೂ, ಇದರಿಂದ ಈ ಸಂಸ್ಕಾರಗಳೆಲ್ಲ ತಮ್ಮೊಳಗೆ ಪ್ರವೇಶಿಸುತ್ತಿರುವುವೆಂದೂ ಅವರಿಗೆ ಮನವರಿಕೆಯಾಗಿತ್ತು. ಆಗ ಅವರು ಈ ಶಕ್ತಿಯನ್ನು ಠಾಕೂರರಿಗೆ ಹಿಂದಿರುಗಿಸಿದರು.

ಶ್ರೀಮಾತೆಯವರು ಠಾಕೂರರನ್ನು ಸಮಾಧಿಯಿಂದ ಕೆಳಗಿಳಿಸಿ ಅವರಿಗೆ ಎಣ್ಣೆ ಹಚ್ಚಿ ಸ್ನಾನ ಮಾಡಿಸಿ ಆಹಾರವನ್ನು ಉಣಿಸುತ್ತಿದ್ದರು. ಕಲ್ಕತ್ತೆಗೆ ಹೋಗದ ಮತ್ತು ಭಕ್ತರು ದಕ್ಷಿಣೇಶ್ವರಕ್ಕೆ ಬಾರದಿದ್ದ ದಿನಗಳಲ್ಲಿ ಅಧಿಕಾಂಶ ಸಮಯ ಠಾಕೂರರು ಬಾಹ್ಯ ಪ್ರಜ್ಞಾಶೂನ್ಯರಾಗಿ ಸಮಾಧಿಸ್ಥಿತಿಯಲ್ಲಿರುತ್ತಿದ್ದರು.

ಸ್ವಾಮೀಜಿ ಠಾಕೂರರೊಂದಿಗೆ ತುಂಬ ತರ್ಕ ಮಾಡುತ್ತಿದ್ದರು. ಆಗ ಠಾಕೂರರು ಅವರಿಗೊಮ್ಮೆ ಹೇಳಿದರು, ''ನೋಡು, ನೀನೊಬ್ಬ ರತ್ನಪಡಿ ವ್ಯಾಪಾರಿಯಾಗಿದ್ದು ಹೀಗೆ ಮಾತನಾಡುವುದೆ? ಒಂದು ಕತೆಯನ್ನು ಕೇಳು. ಧನಿಕನೊಬ್ಬ ವಜ್ರವನ್ನು ಮಾರಲು ಹೋದ. ಇದನ್ನು ಕಂಡ ರತ್ನಪಡಿ ವ್ಯಾಪಾರಿಯೊಬ್ಬನಿಗೆ ಇದು ಬಹಳ ಬೆಲೆಬಾಳುವ ವಜ್ರವೆಂದು ತಿಳಿಯಿತು. ಅವನು ಧನಿಕನಿಗೆ ೨ ಲಕ್ಷ ರೂಪಾಯಿಗಳನ್ನು ಕೊಡಲು ಮುಂದಾದನು. ಅದೇ ಸಮಯಕ್ಕೆ ಮತ್ತೊಬ್ಬ ವ್ಯಾಪಾರಿ ಅಲ್ಲಿಗೆ ಬಂದಾಗ ಮೊದಲನೆಯ ವ್ಯಾಪಾರಿಯು ವಜ್ರವನ್ನು ತನ್ನ ಪಾದರಕ್ಷೆಯಲ್ಲಿ ಅಡಗಿಸಿಕೊಂಡನು. ಎರಡನೆಯವನು ಹೊರಟುಹೋದಾಗ ಆ ವಜ್ರವನ್ನು ಪಾದರಕ್ಷೆಯಿಂದ ಹೊರತೆಗೆದ; ಆ ವಜ್ರವು ಚೂರು ಚೂರಾಗಿ ಹೋಗಿತ್ತು. ಏನಾಯಿತು ಗೊತ್ತೆ? ಆ ವಜ್ರವು ಹೇಳಿತು, 'ಅಭಿಮಾನದಿಂದಾಗಿ ನಾನು ಒಡೆದುಹೋದೆ. ಅರ್ಥಾತ್ ವ್ಯಕ್ತಿಗಳ ಶಿರದಲ್ಲಿ ರಾರಾಜಿಸುವ ನನ್ನನ್ನು ನೀನು ಚಪ್ಪಲಿಯಲ್ಲಿ ಇರಿಸಿದೆಯಲ್ಲ!' ಠಾಕೂರರು ಹೇಳಿದರು, 'ನಿನ್ನಂತಹ ಅಧಿಕಾರಿಯೇ ನನ್ನನ್ನು ಅರ್ಥಮಾಡಿಕೊಳ್ಳದಿದ್ದರೆ ನನ್ನ ಸ್ಥಿತಿಯೂ ಆ ವಜ್ರದಂತೆಯೆ.'

## ಸ್ವಾಮಿ ಶುದ್ಧಾನಂದರ ಸ್ಮೃತಿ

(ಸ್ವಾಮಿ ಶುದ್ಧಾನಂದರು ಸ್ವಾಮೀಜಿಯ ಶಿಷ್ಯರು; ರಾಮಕೃಷ್ಣ ಮಠ-ಮಿಶನ್ನಿನ ಐದನೇ ಪ್ರೆಸಿಡೆಂಟ್ ಆಗಿದ್ದರು. ಸ್ವಾಮಿ ಅನಿಕೇತಾನಂದ (ದಿನೇಶ ಮಹಾರಾಜ್) ಅವರ ಸೇವಕರಾಗಿದ್ದರು. ೨೯.೦೯.೧೯೬೨ರಂದು ಬೇಲೂರು ಮಠದಲ್ಲಿ ಅವರು ಸ್ವಾಮಿ ಶುದ್ಧಾನಂದರ ಬಗ್ಗೆ ಮಾತನಾಡಿದರು. ಈ ಸ್ಮೃತಿಕತೆಯನ್ನು ನನಗೆ ಬರೆದುಕೊಡಲು ಹೇಳಿದಾಗ ಅವರು ಕೆಲವು ಅಂಶಗಳನ್ನು ಬರೆದುಕೊಟ್ಟರು.)

ಸ್ವಾಮಿ ಶುದ್ಧಾನಂದರು ಸತ್ಯಕ್ಕೆ ವಿಶೇಷ ಪ್ರಾಮುಖ್ಯತೆ ನೀಡುತ್ತಿದ್ದರು. ಅವರು ಪ್ರೆಸಿಡೆಂಟ್ ಆದ ಮಾರನೆಯ ದಿನ ವಾರ್ತಾಪತ್ರಿಕೆಯಲ್ಲಿ ಅವರ ವಯಸ್ಸು ಹಾಗು ವಿದ್ಯಾರ್ಹತೆ ಕುರಿತು ಹೆಚ್ಚಾಗಿ ಬರೆದಾಗ ಅವರು ಅಂದಿನ ಜನರಲ್ ಸೆಕ್ರೆಟರಿಗಳಾಗಿದ್ದ ಸ್ವಾಮಿ ಮಾಧವಾನಂದರನ್ನು ಕರೆದು ಹೇಳಿದರು, ''ಪತ್ರಿಕೆಯಲ್ಲಿ ತಪ್ಪು ಬರೆದಿದ್ದಾರೆ. ನೀನು ಪತ್ರಿಕೆಯ ಸಂಪಾದಕರಿಗೆ ನನಗೀಗ ಎಷ್ಟು ವರ್ಷ, ಎಷ್ಟು ತಿಂಗಳು ಹಾಗು ವಿದ್ಯಾರ್ಹತೆ ಐ.ಎ., ಎರಡನೇ ದರ್ಜೆ ಎಂದು ತಿದ್ದಲು ಹೇಳು'' ಎಂದರು. ಮಾಧವಾನಂದರು ಅದಕ್ಕೊಪ್ಪದೆ, ''ನಾವು ಸಾಧುಗಳು. ಜೀವಿತ ಕಾಲದಲ್ಲಿ ನಮ್ಮ ಶಿಕ್ಷಣ, ಪದವಿ ಮುಂತಾದವುಗಳನ್ನು ಪ್ರಕಟಿಸುವುದಿಲ್ಲ'' ಎಂದರು.

'ಶ್ರೀರಾಮಕೃಷ್ಣ ವಚನವೇದ'ದ ಮೇಲೆ ಅವರಿಗೆ ಅಪಾರ ಶ್ರದ್ಧೆ. ಪ್ರತಿನಿತ್ಯ ಬೆಳಗ್ಗೆ ೭ ಗಂಟೆಯಿಂದ ಠಾಕೂರರ ನೈವೇದ್ಯದ ಗಂಟೆ ಬಾರಿಸುವವರೆಗೂ ಅದರ ಪಠಣ ಮುಂದುವರಿಯುತ್ತಿತ್ತು. ಪುನಃ ಸಾಯಂಕಾಲ ४ರಿಂದ ಠಾಕೂರರ ಆರತಿಯ ಗಂಟೆ ಹೊಡೆಯುವವರೆಗೂ ಓದುತ್ತಿದ್ದರು. ''ಈಗಲೂ ಠಾಕೂರರ 'ವಚನವೇದ'ದಲ್ಲಿ ಹೊಸ ಹೊಸ ಭಾವಗಳು ಕಂಡುಬರುತ್ತವೆ. ಮನಸ್ಸಿನ ಭಾವಗಳು ವಿಕಸನಗೊಂಡಂತೆ ವಚನವೇದದ ಭಾವವೂ ನೂತನ ಭಾವದಲ್ಲಿ ಪ್ರಕಾಶಿಸುತ್ತವೆ,'' ಎನ್ನುತ್ತಿದ್ದರು.

ಸ್ವಾಮಿ ಶುದ್ಧಾನಂದರ ಬಳಿ ಅಹರ್ನಿಶಿ 'ವಚನವೇದ'ದ ಪಠಣ ನಡೆಯುತ್ತಿತ್ತು. ಯಾರಾದರೂ ಉಪದೇಶಕ್ಕಾಗಿ ಬಂದರೆ, ''ವಚನವೇದವನ್ನು ಕೇಳು, ಠಾಕೂರರು ಎಲ್ಲ ಪ್ರಶ್ನೆಗಳಿಗೂ ಉತ್ತರ ನೀಡಿದ್ದಾರೆ. ಅವರ ಉಪದೇಶದಿಂದ ನಿಮ್ಮ ಸಮಸ್ಯೆ ಪರಿಹಾರವಾಗದಿದ್ದರೆ, ನನ್ನ ಉಪದೇಶದಿಂದಲೂ ಯಾವ ಪ್ರಯೋಜನವೂ ಇಲ್ಲ,'' ಎನ್ನುತ್ತಿದ್ದರು. ಬಂದವರು ಸಮಯವಿದ್ದಷ್ಟು ಹೊತ್ತು ಕುಳಿತಿದ್ದು, ಕಡೆಗೆ ಹೊರಟುಹೋಗುತ್ತಿದ್ದರು.

ಸ್ವಾಮಿ ಶುದ್ಧಾನಂದಜಿಯವರು ತಮ್ಮ ಮಹಾಸಮಾಧಿಗೆ ಮೊದಲು ಮೂರು ದಿನ-ಮೂರು ರಾತ್ರಿಗಳು ಕೋಮಾದಲ್ಲಿದ್ದರು. ಮಹಾಸಮಾಧಿಯ ಹಿಂದಿನ ರಾತ್ರಿ ಕಣ್ಣುಗಳನ್ನು ತೆರೆದು 'ಜಯ್ ಮಾ, ಜಯ್ ಠಾಕೂರ್, ಜಯ್ ಸ್ವಾಮೀಜಿ' ಎನ್ನುತ್ತ ಮೂರು-ಮೂರು ಸಲ ಪ್ರಣಾಮ ಮಾಡಿದರು. ನಂತರ ಕಣ್ಣು ಮುಚ್ಚಿದ ಅವರು ಮತ್ತೇನೂ ಮಾತನಾಡಲಿಲ್ಲ. ಮರುದಿನ ಬೆಳಗ್ಗೆ ಸುಮಾರು ೮-೯ ಗಂಟೆಯ ವೇಳೆಗೆ ಮಹಾಸಮಾಧಿಯನ್ನು ಹೊಂದಿದರು. ಮಹಾಸಮಾಧಿಯ ಬಳಿಕ ಅವರ ಮುಖವು ಅಪೂರ್ವ ಸೌಂದರ್ಯದಿಂದ ಶೋಭಿಸುತ್ತಿತ್ತು. ✽